ಹುಕ್ಕೇರಿ ತಾಲ್ಲೂಕಿನ ಗೋಡಗೇರಿ, ನೊಗಿನಾಳ್ ಮಧ್ಯೆ ಹಿರಣ್ಯಕೇಶಿ ನದಿಗೆ ಸೇತುವೆ

2246: ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಗೋಡಗೇರಿ ಮತ್ತು ನೊಗಿನಾಳ ಗ್ರಾಮದ ಜನರು ತಾಲ್ಲೂಕು ಕೇಂದ್ರಕ್ಕೆ ಬರಬೇಕಾದರೆ ಹಿರಣ್ಯಕೇಶಿ ನದಿಗೆ ಸೇತುವೆ ಇಲ್ಲದಿರುವುದರಿಂದ 20–25 ಕಿ.ಮೀ. ಸುತ್ತುವರೆದು ಬರುವ ವಿಚಾರವು ಸರ್ಕಾರಕ್ಕೆ ತಿಳಿದಿದೆಯೇ;

ಆ) ಗೋಡಗೇರಿ, ನೊಗಿನಾಳ್ ಮತ್ತು ಹುಕ್ಕೇರಿ ನಡುವೆ ಬರುವ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಿದರೆ ಕೇವಲ 5 ಕಿಮೀ. ದೂರ ತಾಲ್ಲೂಕು ಕೇಂದ್ರವಾಗುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಸಾರ್ವಜನಿಕರು ಅನುಭವಿಸುತ್ತಿರುವ ಕಷ್ಟವನ್ನು ನಿವಾರಿಸಲು ಹಿರಣ್ಯಕೇಶಿ ನದಿಗೆ ಅಡ್ಡವಾಗಿ ಸೇತುವೆ ಕಟ್ಟುವ ವಿಚಾರವೇನಾದರೂ ಇದೆಯೇ;

ಈ) ಇದ್ದಾಗ ಯಾವಾಗ ಕಟ್ಟುವಿರಿ ಮತ್ತು ಎಷ್ಟು ಅವಧಿಯೊಳಗೆ ಪೂರ್ಣಗೊಳಿಸುವಿರಿ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಗೋಡಗೇರಿ ಸೋಗಿನಾಳ ಗ್ರಾಮದ ಜನರು ತಾಲ್ಲೂಕು ಕೇಂದ್ರಕ್ಕೆ ಬರಬೇಕಾದರೆ ಘಟಪ್ರಭಾ ನದಿಗೆ ಸೇತುವೆ ಇಲ್ಲದಿರುವುದರಿಂದ 21 ಕಿಮೀ ಸುತ್ತುವರೆದು ಬರಬೇಕಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಗೋಡಗೇರಿ ನೋಗಿನಾಳ ಮತ್ತು ಹುಕ್ಕೇರಿ ನಡುವೆ ಬರುವ ಘಟಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಿದರೆ ತಾಲ್ಲೂಕು .ಕೇಂದ್ರಕ್ಕೆ ಬರಲು ಸುಮಾರು 10.00 ಕಿಮೀ.ಗಳಷ್ಟು ದೂರ ಕಡಿಮೆ ಆಗುವುದು.

ಇ) ಪ್ರಸ್ತಾಪವಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಹುಕ್ಕೇರಿ ಪಟ್ಟಣದಲ್ಲಿ ಬೈಪಾಸ್ ರಸ್ತೆ ನಿರ್ಮಾಣ

2248:– ಶ್ರೀ ಉಮೇಶ. ವಿ.ಕತ್ತಿ (ಹುಕ್ಕೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹುಕ್ಕೇರಿ ಪಟ್ಟಣದಲ್ಲಿ ಜನಸಂಖ್ಯೆ ಅಧಿಕವಿರುವ ಸಂಗತಿಯು ಸರ್ಕರಕ್ಕೆ ತಿಳಿದಿದೆಯೇ ? ಇಲ್ಲಿನ ಮುಖ್ಯ ರಸ್ತೆ ಊರ ಮಧ್ಯದಲ್ಲಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಸಂಗತಿ ನಿಜವೇ;

ಆ) ಹಾಗಿದ್ದಲ್ಲಿ ಊರ ಹೊರಗಡೆ ಪರ್ಯಾಯ ರಸ್ತೆ (ಬೈಪಾಸ್ ರಸ್ತೆ) ನಿರ್ಮಾಣ ಮಾಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಇ) ಇದ್ದಲ್ಲಿ ಬೈಪಾಸ್ ರಸ್ತೆ ಬಗ್ಗೆ ಕೈಗೊಂಡ ಕ್ರಮವೇನು ? ಈ ವರ್ಷದಲ್ಲಿ ಬೈಪಾಸ್ ರಸ್ತೆಯನ್ನು ಪೂರ್ಣಗೊಳಿಸಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ತಿಳಿದಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಬೈಪಾಸ್ ರಸ್ತೆಗಾಗಿ ಬೇಕಾಗುವ ಜಮೀನು ಪಡೆದುಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಭೂಸ್ವಾಧೀನವಾದ ನಂತರ ಕಾಮಗಾರಿಯನ್ನು ತೆಗೆದುಕೊಳ್ಳುವ ಪ್ರಸ್ತಾಪವಿದೆ.

ಹುಕ್ಕೇರಿ ತಾಲ್ಲೂಕು ಚಿಕ್ಕೋಡಿ ಉಪ ಕಾಲುವೆ ನಿರ್ಮಾಣ ಅರ್ಧಕ್ಕೆ ನಿಂತಿರುವ ವಿಚಾರ

2253: ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ):– ಮಾನ್ಯ ಭಾರಿ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನ ಚಿಕ್ಕೋಡಿ ಉಪ ಕಾಲುವೆ ಅಂದರೆ ಬ್ಲಾಕ್ ನಂ.15. ಶಿರಡಾಣ ಜಾಂಗಟಿಹಾಳ್ ಗ್ರಾಮಗಳಿಗೆ ನೀರು ಹೋಗುವ ಕಾಲುವೆ ಕಾಮಗಾರಿ ಅರ್ಧಕ್ಕೆ ನಿಂತಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಹೀಗಾಗಲು ಕಾರಣವೇನು; ಈ ವಿಳಂಬ ನೀತಿಯ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು;

ಇ) ಅರ್ಧಕ್ಕೆ ನಿಂತ ಕಾಲುವೆ ನಿರ್ಮಾಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಓಂ ಪ್ರಕಾಶ್ ಕಣಗಲಿ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು):–

ಅ) ಬಂದಿದೆ. ಸದರಿ ಗ್ರಾಮಗಳು ಉಪ ಕಾಲುವೆಯ ಬ್ಲಾಕ್ ನಂ. 16 (ಅ)ದಲ್ಲಿ ಬರುತ್ತದೆ.

ಆ) ಭೂಸ್ವಾಧೀನ ಪಡಿಸಿಕೊಳ್ಳುವಲ್ಲಿ ತೊಂದರೆ ಮತ್ತು ಸಿಡಿಮದ್ದಿನಿಂದ ಸ್ಫೋಟಿಸುವ ಕಾರ್ಯಕ್ಕೆ ಸರಹದ್ದಿನಲ್ಲಿ ಗ್ರಾಮಸ್ಥರು ತಕರಾರು ಮಾಡುತ್ತಿದ್ದುದರಿಂದ ಕಾಮಗಾರಿಯಲ್ಲಿ ವಿಳಂಬವಾಗಿದೆ.

ಇ) ಜೂನ್ 1993ರ ವೇಳೆಗ ಕಾಲುವೆಯ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

11.20 ಎ.ಎಂ

ಅಧ್ಯಕ್ಷರು:– ಸಭೆಯ ಮುಂದೆ ಮಂಡಿಸಲಾಯಿತು.

1. ಶ್ರೀ. ಎನ್. ಹುಚ್ಚಮಾಸ್ತಿಗೌಡ (ಕೃಷಿ ಮಂತ್ರಿ) ಅವರು:–

"1956ನೇ ಇಸವಿಯ ಕಂಪನಿಗಳ ಅಧಿನಿಯಮ 619 (ಎ) ಕಲಮಿನ ಮೇರೆಗೆ:

1989–90ನೇ ಸಾಲಿನ ಬೆಂಗಳೂರಿನ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 17ನೇ ವಾರ್ಷಿಕ ವರದಿಯನ್ನು ಪಟಿಂಡಿಸುತ್ತೇನೆ"